**All India Radio: Bangalore**
**National Bulletin In Kannada**
**15.01.2025  13.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**15.01.2025  13.10 p.m.**

****************

ಮುಖ್ಯಾಂಶಗಳು

೧.	ಐಎನ್‌ಎಸ್ ಸೂರತ್, ಐಎನ್‌ಎಸ್ ನೀಲಗಿರಿ, ಐಎನ್‌ಎಸ್ ವಾಘ್‌ಶೀರ್ ಅನ್ನು ರಾಷ್ಟ್ರಕ್ಕೆ ಸಮರ್ಪಿಸಿದ ಪ್ರಧಾನಿ

೨.	ದೇಶಾದ್ಯಂತ ಇಂದು ಸೇನಾದಿನ ಆಚರಣೆ; ಸೇನಾ ಸಿಬ್ಬಂದಿ ತ್ಯಾಗ ಸ್ಮರಿಸಿ ಗಣ್ಯರಿಂದ ಶುಭಾಶಯ

೩.	ಸಿಐಎಸ್‌ಎಫ್ ನ ಎರಡು ಹೊಸ ಮೀಸಲು ಬೆಟಾಲಿಯನ್ ರಚಿಸಲು ಕೇಂದ್ರ ಸರ್ಕಾರ ಅನುಮೋದನೆ

೪.	ಮಹಿಳಾ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್; ಐರ್ಲೆಂಡ್ ವಿರುದ್ಧ ಟಾಸ್ ಗೆದ್ದು ಭಾರತ ಬ್ಯಾಟಿಂಗ್; ಸ್ಮೃತಿ ಮಂದಾನ ಶತಕ

****************

ಪ್ರಧಾನಿ ನರೇಂದ್ರ ಮೋದಿ ಅವರಿಂದು ಮುಂಬೈನ ನೌಕಾನೆಲೆಯಲ್ಲಿ ಕಾರ್ಯಾರಂಭ ಮಾಡಲಿರುವ ಮುಂಚೂಣಿ ಯುದ್ಧ ನೌಕೆಗಳಾದ ಐಎನ್‌ಎಸ್ ಸೂರತ್, ಐಎನ್‌ಎಸ್ ನೀಲಗಿರಿ ಮತ್ತು ಜಲಾಂತರ್ಗಾಮಿ ಯುದ್ಧ ನೌಕೆ ಐಎನ್‌ಎಸ್ ವಾಘ್‌ಶೀರ್‌ಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿದರು.

ಐಎನ್‌ಎಸ್ ಸೂರತ್, ಐಎನ್‌ಎಸ್ ನೀಲಗಿರಿ ಮತ್ತು ಐಎನ್‌ಎಸ್ ವಾಘ್‌ಶೀರ್ ಯುದ್ಧ ನೌಕೆಗಳ ಕಾರ್ಯಾರಂಭ ರಕ್ಷಣಾ ಉತ್ಪಾದನೆ ಮತ್ತು ಕಡಲ ಭದ್ರತೆಯಲ್ಲಿ ಜಾಗತಿಕ ನಾಯಕನಾಗುವ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಈ ದಿನ ಭಾರತದ ಕಡಲ ಪರಂಪರೆ, ನೌಕಾಪಡೆಯ ಗೌರವಶಾಲಿ ಇತಿಹಾಸ ಮತ್ತು ಆ ಸಂದರ್ಭದಲ್ಲಿ ಅಭಿಯಾನಕ್ಕೆ ಒಂದು ಮಹತ್ವ ದಿನವಾಗಿದೆ. ಭಾರತದ ನೌಕಾಪಡೆಗೆ ಹೊಸ ರೂಪ ನೀಡಿದ್ದ ಛತ್ರಪತಿ ಶಿವಾಜಿಯವರ ಪುಣ್ಯಭೂಮಿಯಲ್ಲಿ ಇಂದು ೨೧ನೇ ಶತಮಾನದ ನೌಕಾಪಡಯನ್ನು ಸಶಕ್ತಗೊಳಿಸುವ ಪಥದಲ್ಲಿ ಪ್ರಮುಖ ಹೆಜ್ಜೆ ಇರಿಸಲಾಗಿದೆ ಎಂದರು.

ಇಂದು ರಾಷ್ಟ್ರಕ್ಕೆ ಸಮರ್ಪಿಸಿದ ಯುದ್ಧ ನೌಕೆಗಳು, ದೇಶದ ಸುರಕ್ಷತೆ ಮತ್ತು ಪ್ರಗತಿಗೆ ಹೊಸ ಶಕ್ತಿ ನೀಡಲಿದೆ. ಭಾರತ ಇಂದು ಇಡೀ ವಿಶ್ವದಲ್ಲೇ ವಿಶೇಷವಾಗಿ ಜಾಗತಿಕ ದಕ್ಷಿಣ ರಾಷ್ಟ್ರಗಳಲ್ಲಿ ಒಂದು ವಿಶ್ವಾಸಾರ್ಹ ಹಾಗೂ ಜವಾಬ್ದಾರಿಯುತ ಪಾಲುದಾರ ರಾಷ್ಟ್ರವಾಗಿ ಹೊರಹೊಮ್ಮಿದೆ. ಭಾರತ, ವಿಸ್ತರಣಾವಾದವನ್ನು ಅನುಸರಿಸದೇ, ವಿಕಾಸವಾದದ ಭಾವನೆಯೊಂದಿಗೆ ಕೆಲಸ ಮಾಡುತ್ತದೆ ಎಂದು ಹೇಳಿದ್ದಾರೆ.

ಧ್ವನಿ: ಪ್ರಧಾನಿ ನರೇಂದ್ರ ಮೋದಿ

ಬಳಿಕ ಮಾತನಾಡಿದ ರಕ್ಷನಾ ಸಚಿವ ರಾಜನಾಥ್ ಸಿಂಗ್, ಇಂದಿನಿಂದ ಕಾರ್ಯಾರಂಭ ಮಾಡಲಿರುವ ಯುದ್ಧ ನೌಕೆಗಳಾದ ಐಎನ್‌ಎಸ್ ಸೂರತ್ ಮತ್ತು ಐಎನ್‌ಎಸ್ ನೀಲಗಿರಿಯ ಶೇಕಡ ೭೫ ರಷ್ಟು ಭಾಗಗಳು ಭಾರತದಲ್ಲೇ ವಿಕಸನಗೊಳಿಸಲಾಗಿದೆ. ಆತ್ಮನಿರ್ಭರ ಭಾರತ ಧ್ಯೇಯದೊಂದಿಗೆ ಇತರ ವಲಯಗಳಲ್ಲೂ ದೇಶೀಯ ನಿರ್ಮಿತ ಉತ್ಪನ್ನಗಳ ಬಳಕೆ ಹೆಚ್ಚುತ್ತಿದೆ ಎಂದು ತಿಳಿಸಿದ್ದಾರೆ.

ಧ್ವನಿ: ರಾಜನಾಥ್ ಸಿಂಗ್ ರಕ್ಷಣಾ ಸಚಿವ

ಭೇಟಿಯ ಭಾಗವಾಗಿ ಪ್ರಧಾನಿ, ಮುಂಬೈನ ಖಾರ್ಘರ್‌ನಲ್ಲಿ ಇಸ್ಕಾನ್‌ನ ಶ್ರೀ ರಾಧಾ ಮದನ್ ಮೋಹನ್‌ಜೀ ದೇವಾಲಯವನ್ನು ಉದ್ಘಾಟಿಸಲಿದ್ದಾರೆ. ಒಂಬತ್ತು ಎಕರೆ ಪ್ರದೇಶದಲ್ಲಿ ಹರಡಿರುವ ಈ ದೇವಾಲಯ ಹಲವು ದೇವತೆಗಳ ಮಂದಿರ, ವೇದ ಶಿಕ್ಷಣ ಕೇಂದ್ರ, ಪ್ರಸ್ತಾವಿತ ವಸ್ತುಸಂಗ್ರಹಾಲಯಗಳು ಮತ್ತು ಸಭಾಂಗಣವನ್ನು ಒಳಗೊಂಡಿದೆ.

****************

ದೇಶಕ್ಕಾಗಿ ಸಶಸ್ತ್ರ ಪಡೆಗಳು ಮಾಡಿದ ಅಪಾರ ತ್ಯಾಗಗಳನ್ನು ಗೌರವಿಸಲು ಇಂದು ದೇಶಾದ್ಯಂತ ಸೇನಾ ದಿನವನ್ನು ಆಚರಿಸಲಾಗುತ್ತಿದೆ. ಇದು ಭಾರತೀಯ ಸೈನಿಕರ ಧೈರ್ಯ, ಬದ್ಧತೆ ಮತ್ತು ಮಾತೃಭೂಮಿಗೆ ನೀಡಿದ ಸೇವೆಯನ್ನು ಆಚರಿಸುವ ದಿನವಾಗಿದೆ.

೧೯೪೯ ರಲ್ಲಿ ಜನರಲ್ ಕೆ.ಎಂ.ಕಾರ್ಯಪ್ಪ, ಕೊನೆಯ ಬ್ರಿಟಿಷ್ ಕಮಾಂಡರ್-ಇನ್-ಚೀಫ್‌ನಿಂದ ಭಾರತೀಯ ಸೈನ್ಯದ ಕಮಾಂಡರ್ ಆಗಿ ಅಧಿಕಾರ ವಹಿಸಿಕೊಂಡು, ಸ್ವತಂತ್ರ ಭಾರತದ ಮೊದಲ ಭಾರತೀಯ ಕಮಾಂಡರ್-ಇನ್-ಚೀಫ್ ಆದ ಸ್ಮರಣಾರ್ಥ ಈ ದಿನವನ್ನು ಸೇನಾ ದಿನವನ್ನಾಗಿ ಆಚರಿಸಲಾಗುತ್ತದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಸೇನಾ ಸಿಬ್ಬಂದಿ ಮತ್ತು ಮಾಜಿ ಸೈನಿಕರಿಗೆ ಸೇನಾ ದಿನದ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ರಾಷ್ಟ್ರದ ಸಾರ್ವಭೌಮತೆಯನ್ನು ಕಾಪಾಡುವಲ್ಲಿ ಮಹತರ ಪಾತ್ರ ವಹಿಸುವ ಸೇನಾ ಸಿಬ್ಬಂದಿಯ ಅಚಲ ಬದ್ಧತೆ ಎಲ್ಲರಿಗೂ ಸ್ಫೂತಿದಾಯಕ ಎಂದು ಹೇಳಿದ್ದಾರೆ.

ಸೇನಾ ದಿನದ ಶುಭಾಶಯ ಕೋರಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಪರಿವರ್ತನೆ ಮತ್ತು ಆಧುನೀಕರಣದ ಮೇಲೆ ಕೇಂದ್ರೀಕರಿಸಿ ಸೈನಿಕರು ಹಾಗೂ ಅವರ ಕುಟುಂಬದವರ ಕಲ್ಯಾಣಕ್ಕೆ ಸರ್ಕಾರ ಬದ್ಧವಾಗಿದೆ. ಭಾರತೀಯ ಸೇನೆ ದೃಢ ಸಂಕಲ್ಪ, ವೃತ್ತಿಪರತೆ, ಬದ್ಧತೆಯ ಸಾಕಾರ ರೂಪವಾಗಿದೆ. ಇಂದು ದೇಶದ ಸಮಸ್ತ ನಾಗರೀಕರು, ಧೀರ ಯೋಧರು ಗೈದ ತ್ಯಾಗವನ್ನು ಸ್ಮರಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಸೇನಾ ಸಿಬ್ಬಂದಿ ಮತ್ತು ಅವರ ಕುಟುಂಬ ಸದಸ್ಯರಿಗೆ ಶುಭಾಶಯ ಕೋರಿದ್ದಾರೆ. ಸೈನಿಕರ ಅದಮ್ಯ ಶೌರ್ಯ ಮತ್ತು ಧೈರ್ಯದಿಂದಾಗಿ ಭಾರತೀಯ ಸೇನೆಯು ವಿಶ್ವದ ಅತ್ಯುತ್ತಮ ಸೇನೆಗಳಲ್ಲಿ ಸ್ಥಾನವನ್ನು ಗಳಿಸಿದೆ ಎಂದು ತಿಳಿಸಿದ್ದಾರೆ. ಮೂರು ಸೇನೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಕೂಡ ೭೭ನೇ ಸೇನಾದಿನದ ಶುಭಾಶಯಗಳನ್ನು ಕೋರಿದ್ದಾರೆ.

****************

ಕೇಂದ್ರ ಕೈಗಾರಿಕಾ ಭದ್ರತಾ ಪಡೆ- ಸಿಐಎಸ್‌ಎಫ್ ನ ಎರಡು ಹೊಸ ಮೀಸಲು ಬೆಟಾಲಿಯನ್‌ಗಳನ್ನು ರಚಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಇದರೊಂದಿಗೆ ಒಟ್ಟು ಬೆಟಾಲಿಯನ್‌ಗಳ ಸಂಖ್ಯೆ ೧೩ ರಿಂದ ೧೫ಕ್ಕೆ ಏರಿದೆ. ಪ್ರತಿ ಹೊಸ ಬೆಟಾಲಿಯನ್ ವಿವಿಧ ಶ್ರೇಣಿಯ ಸುಮಾರು ೧ ಸಾವಿರದ ೨೫ ಸಿಬ್ಬಂದಿಯನ್ನು ಒಳಗೊಂಡಿರಲಿದ್ದು, ಹಿರಿಯ ಕಮಾಡೆಂಟ್ ಮಟ್ಟದ ಅಧಿಕಾರಿ ಅದರ ನೇತೃತ್ವವನ್ನು ವಹಿಸಲಿದ್ದಾರೆ ಎಂದು ಗೃಹ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಆಂತರಿಕ ಭದ್ರತೆ ಸಂಬಂಧಿಸಿದಂತೆ ತರಬೇತಿ ಪಡೆದ ಸಿಬ್ಬಂದಿಯ ಕಾರ್ಯಪಡೆ ರಚಿಸುವ ಮೂಲಕ ಸಿಐಪಿಎಫ್‌ನಲ್ಲಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವಲ್ಲಿ ಈ ಹೊಸ ಕಾರ್ಯಪಡೆಗಳು ಪ್ರಮುಖ ಪಾತ್ರ ವಹಿಸಲಿದೆ. ಈ ಬೆಟಾಲಿಯನ್‌ಗಳು ವಿಶೇಷವಾಗಿ ತರಬೇತಿ ಪಡೆದು, ಸುಸಜ್ಜಿತ ಸಿಬ್ಬಂದಿಯನ್ನು ಒಳಗೊಂಡಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

****************

ಎರಡು ದಿನಗಳ ಸ್ಪೇನ್ ಪ್ರವಾಸದಲ್ಲಿರುವ ವಿದೇಶಾಂಗವ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್, ಇಂದು ಸ್ಪೇನ್ ಅಧ್ಯಕ್ಷ ಫೆಡ್ರೊ ಸ್ಯಾಂಚೆಸ್ ಅವರನ್ನು ಭೇಟಿಂiiದರು.

ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಭಾರತ ಹಾಗೂ ಸ್ಪೇನ್ ನಡುವಿನ ಪಾಲುದಾರಿಕೆ ಬಲವರ್ಧನೆ ಜೊತೆಗೆ ಸ್ಪೇನ್ ಅಧ್ಯಕ್ಷರ ಯಶಸ್ವಿ ಭಾರತ ಭೇಟಿಯ ಮೆಲುಕು ಹಾಕಲಾಯಿತು. ಮ್ಯಾಡ್ರಿಡ್‌ನಲ್ಲಿ ನಡೆದ ಸಮಾಲೋಚನೆ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು ಎಂದು ತಿಳಿಸಿದ್ದಾರೆ.

****************

ನವದೆಹಲಿಯಲ್ಲಿಂದು ಕಾಂಗ್ರೆಸ್ ಪಕ್ಷದ ನೂತನ ಪ್ರಧಾನ ಕಚೇರಿ ಇಂದಿರಾ ಭವನವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಹಿರಿಯ ನಾಯಕಿ ಸೋನಿಯಾ ಗಾಂಧಿ ಉದ್ಘಾಟಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಖಾಯಂ ಮತ್ತು ವಿಶೇಷ ಆಹ್ವಾನಿತರು, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರು, ಉಭಯ ಸದನಗಳ ಸಂಸದರು,

ಮಾಜಿ ಮುಖ್ಯಮಂತ್ರಿಗಳು ಸೇರಿದಂತೆ ಕನಿಷ್ಠ ೪೦೦ ಪ್ರಮುಖ ಕಾಂಗ್ರೆಸ್ ನಾಯಕರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಕರ್ನಾಟಕದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೇರಿದಂತೆ ಹಲವು ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಗೌರವಾರ್ಥವಾಗಿ ಇಂದಿರಾ ಭವನ ಎಂದು ಹೆಸರಿಸಲಾದ ಪ್ರಧಾನ ಕಚೇರಿಯು ೧೫ ವರ್ಷಗಳಿಂದ ನಿರ್ಮಾಣ ಹಂತದಲ್ಲಿತ್ತು.

****************

ಮಹಾರಾಷ್ಟ್ರದ ಮರಾಠ್ ವಾಡ ಪ್ರದೇಶದಲ್ಲಿಂದು ಹತ್ತನೇ ಅಜಂತಾ ವೆರುಲ್ ಅಂತಾರಾಷ್ಟ್ರೀಯ ಚಲಚಿತ್ರೋತ್ಸವಕ್ಕೆ ಚಾಲನೆ ದೊರೆಯಲಿದೆ. ಕಾರ್ಯಕ್ರಮಕ್ಕೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಜಾಜು ಉದ್ಘಾಟಿಸಲಿದ್ದು, ಭಾರತೀಯ ಸಿನಿಮಾಗೆ ನೀಡಿದಂತೆ ಕೊಡುಗೆಗಾಗಿ ಪದ್ಮಭೂಷಣ ಪುರಸ್ಕೃತ ಸಾಯಿ ಪರಾಂಜಪೆ ಅವರಿಗೆ ಪದ್ಮಪಾಣಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಿದ್ದಾರೆ.

ಉದ್ಘಾಟನೆ ಬಳಿಕ ಖ್ಯಾತ ಫ್ರೆಂಚ್ ಮತ್ತು ತಮಿಳು ಭಾಷಾ ಚಿತ್ರ ಲಿಟಲ್ ಜಫ್ನಾವನ್ನು ರಾತ್ರಿ ೯ ಗಂಟೆಗೆ ಪ್ರದರ್ಶಿಸಲಾಗುವುದು.

****************

ಗುಜರಾತ್‌ನ ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ಮೂರು ಪಂದ್ಯಗಳ ಮಹಿಳಾ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಭಾರತ ಹಾಗೂ ಐರ್ಲೆಂಡ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದು, ಬ್ಯಾಟಿಂಗ್ ಆಯ್ದುಕೊಂಡ ಭಾರತ, ಇತ್ತಿಚಿನ ವರದಿಬಂದಾಗ ೩೯.೩ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೨೫೩ ರನ್ ಗಳಿಸಿ ಆಡುತ್ತಿದೆ. ಭಾರತದ ತಂಡದ ನಾಯಕಿ ಸ್ಮೃತಿ ಮಂದಾನ, ೧೩೫ ರನ್ ಗಳಿಸಿ ತಂಡಕ್ಕೆ ಉತ್ತಮ ಆರಂಭ ನೀಡಿದರು.

ಆಡಿರುವ ಎರಡು ಪಂದ್ಯಗಳನ್ನು ಗೆದ್ದು ಸರಣಿ ವಶಪಡಿಸಿಕೊಂಡಿರುವ ಭಾರತ, ಈ ಪಂದ್ಯವನ್ನೂ ಗೆದ್ದು, ವೈಟ್‌ವಾಶ್ ಸಾಧಿಸುವ ಹುಮ್ಮಸ್ಸಿನೊಂದಿಗೆ ಕಣಕ್ಕಿಳಿದಿದೆ.

****************

ಕೋಲ್ಕತ್ತಾದ ಕಿಶೋರ್ ಭಾರತಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಇಂಡಿಯನ್ ಸೂಪರ್ ಲೀಗ್ ಫುಟ್ಬಾಲ್ ಪಂದ್ಯದಲ್ಲಿ, ಮೊಹಮ್ಮದನ್ ಎಸ್ ಸಿ ಹಾಗೂ ಚೆನ್ನೈಯಿನ್ ಎಫ್‌ಸಿ ತಂಡಗಳು ಸೆಣಸಲಿವೆ. ಪಂದ್ಯ ರಾತ್ರಿ ೭:೩೦ ಕ್ಕೆ ಆರಂಭವಾಗಲಿದೆ.

****************

ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಇಂದು ಸಂಜೆ ನಡೆಯಲಿರುವ ಖೋ ಖೋ ವಿಶ್ವಕಪ್ ೨೦೨೫ರ ಪಂದ್ಯದಲ್ಲಿ ಭಾರತೀಯ ಮಹಿಳಾ ಖೋ ಖೋ ತಂಡ, ಇರಾನ್ ತಂಡವನ್ನು ಎದುರಿಸಲಿದೆ.

ಇಂದು ರಾತ್ರಿ ನಡೆಯಲಿರುವ ಪಂದ್ಯದಲ್ಲಿ ಭಾರತೀಯ ಪುರುಷರ ತಂಡ, ಪೆರು ತಂಡದೊಂದಿಗೆ ಸೆಣಸಾಟ ನಡೆಸಲಿದೆ. ಪಂದ್ಯ ರಾತ್ರಿ ೮:೧೫ ಕ್ಕೆ ಪ್ರಾರಂಭವಾಗಲಿದೆ.

"ದಕ್ಷಿಣ ಕೊರಿಯಾ ವಿರುದ್ಧ ಐತಿಹಾಸಿಕ ಗೆಲುವಿನ ನಂತರ ನಾಯಕಿ ಪ್ರಿಯಾಂಕಾ ಇಂಗಲ್ ನೇತೃತ್ವದ ಭಾರತ ಮಹಿಳಾ ತಂಡ ಆತ್ಮವಿಶ್ವಾಸದಿಂದ ಕೂಡಿದ್ದು, ಗೆಲುವಿನ ಓಟವನ್ನು ಮುಂದುವರಿಸಲು ಸಿದ್ಧವಾಗಿದೆ. ಈ ಪಂದ್ಯದಲ್ಲಿ ತಂಡವು ೧೭೫-೧೮ ಅಂಕಗಳ ಬೃಹತ್ ಅಂತರದೊಂದಿಗೆ ಗೆಲುವು ಸಾಧಿಸಿತ್ತು.

ಏತನ್ಮಧ್ಯೆ, ಭಾರತೀಯ ಪುರುಷರ ತಂಡವೂ ನಿನ್ನೆ, ಬ್ರೆಜಿಲ್ ಅನ್ನು ೬೪-೩೪ ಅಂಕಗಳಿಂದ ಸೋಲಿಸಿದೆ.

****************

ದೆಹಲಿ ಹಾಗೂ ರಾಷ್ಟ್ರ ರಾಜಧಾನಿ ಪ್ರದೇಶ-ಎನ್‌ಸಿಆರ್ ನ ಹಲವೆಡೆ ದಡ್ಡ ಮಂಜು ಮುಸುಕಿರುವ ಹಿನ್ನೆಲೆ ಭಾರತೀಯ ಹವಾಮಾನ ಇಲಾಖೆ ಆ ಪ್ರದೇಶಕ್ಕೆ ಆರೆಂಜ್ ಅಲರ್ಟ್ ಘೋಷಿಸಿದೆ.

ಇದರ ಜೊತೆಗೆ ಪಂಜಾಬ್, ಹರಿಯಾಣ, ಬಿಹಾರ್, ಜಾರ್ಖಂಡ್, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಕೆಲವು ಈಶಾನ್ಯ ಪ್ರದೇಶಗಳಲ್ಲಿ ರಾತ್ರಿ ಹಾಗೂ ಬೆಳಗಿನ ಜಾವ ದಟ್ಟ ಮಂಜಿನ ಪರಿಸ್ಥಿತಿ ಇರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

***************